# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಯಲಹಂಕ, ಬೆಂಗಳೂರು.

**ಯಲಹಂಕ ಉಪನಗರ, ವಾರ್ಡ್ ನಂ:04 ಕ್ಕೆ ಸಂಬಂಧಿಸಿದಂತೆ ದಿನಾಂಕ:07/11/2020 ರಂದು ನಡೆದ ವಾರ್ಡ್ ಕಮಿಟಿ ಸಭೆಯ ನಡುವಳಿಗಳು.**

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 1 | ಶ್ರೀ.ಮನೋಜ್‌ಜೈನ್, ಐ.ಎ.ಎಸ್ | ವಿಶೇಷ ಆಯುಕ್ತರು (ಯೋಜನೆ) ಬಿ.ಬಿ.ಎಂ.ಪಿ, ನೋಡಲ್ ಆಫೀಸರ್ (ವಾರ್ಡ್ ನಂ:04) |
| 2 | ಶ್ರೀ.ರಾಜೇಂದ್ರ ನಾಯ್ಕ್ | ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ವಿದ್ಯುತ್ ಗೈರು ಹಾಜರಾಗಿರುತ್ತಾರೆ. |
| 3 | ಶ್ರೀ.ಹೆಚ್.ಪಿ.ಸಚಿನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ |
| 4 | ಶ್ರೀ.ಹೆಚ್.ಕೆ.ದೇವರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, (Road infrastructure, BBMP) |
| 5 | ಶ್ರೀ.ಶ್ರೀನಿವಾಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ರಾಜಕಾಲುವೆ, (ಗೈರು ಹಾಜರಾಗಿರುತ್ತಾರೆ) |
| 6 | ಶ್ರೀ.ಪ್ರಕಾಶ್.ಕೆ.ವಿ. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು ವಿಭಾಗ) |
| 7 | ಶ್ರೀ.ಪ್ರಭುದ್ದ ಕಾಂಬ್ಲೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, (Solid Waste Management, BBMP) |
| 8 | ಶ್ರೀಮತಿ.ಅನುಸೂಯ.ಡಿ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ (ಒಳಚರಂಡಿ) (ಗೈರು ಹಾಜರಿ) |
| 9 | ಶ್ರೀ.ಪಿ.ಎಂ.ಮಲ್ಯಾದ್ರಿ | ತೋಟಗಾರಿಕೆ ಇಲಾಖೆ, ಸೂಪರ್‌ವೈಸರ್ ಯಲಹಂಕ ವಲಯ |
| 10 | ಶ್ರೀ.ಓ.ಜಿ.ಯೋಗೇಶ್ | ಸಹಾಯಕ ಅಭಿಯಂತರರು, ನಗರ ಯೋಜನೆ |
| 11 | ಶ್ರೀ.ರಾಮಸಂಜೀವಯ್ಯ | ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿ ವಾರ್ಡ್ ನಂ:04 |
| 12 | ಶ್ರೀ.ವಿನಾಯಕ.ಕೆ.ಎಂ, | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 13 | ಶ್ರೀ.ಭೈರೇಶ್ | ಸಹಾಯಕ ಅಭಿಯಂತರರು, ಕೆರೆ ಅಭಿವೃದ್ಧಿ (ಗೈರು ಹಾಜರಿ) |

| | | |
|---|---|---|
| 14 | ಶ್ರೀ.ಆನಂದ್.ಎ | ಸಹಾಯಕ ಅಭಿಯಂತರರು, ಬೆಸ್ಕಾಂ, ಯಲಹಂಕ |
| 15 | ಶ್ರೀ.ಪಾವನ ನಾಗತಿ | ಸಹಾಯಕ ಅಭಿಯಂತರರು (ಯೋಜನಾ ವಿಭಾಗ, ಯಲಹಂಕ ವಲಯ) (ಗೈರು ಹಾಜರಿ) |
| 16 | ಶ್ರೀ.ಲಿಂಗರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ:04 ಘನತ್ಯಾಜ್ಯ ನಿರ್ವಹಣೆ |
| 17 | ಶ್ರೀ.ಹೇಮಂತ್.ಕೆ.ಸಿ | ಪಿ.ಎಸ್.ಐ |
| 18 | ಶ್ರೀಮತಿ.ಎನ್.ನೇತ್ರಾವತಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ:04, ಘನತ್ಯಾಜ್ಯ ನಿರ್ವಹಣೆ |
| 19 | ಶ್ರೀಮತಿ.ಅನಿತಾ | ಕಂದಾಯ ಪರಿವೀಕ್ಷಕರು, (ಗೈರು ಹಾಜರಿ) |
| 20 | ಶ್ರೀ.ಶೇಖರ್ | ಯಲಹಂಕ ವಲಯ (ಬಿ.ಬಿ.ಎಂ.ಪಿ ಅರಣ್ಯ) ಆರ್.ಎಫ್.ಓ ಪರವಾಗಿ |
| 21 | ಠಾಣಾಧಿಕಾರಿ | ಯಲಹಂಕ ಓಲ್ಡ್ ಟೌನ್, ಪೋಲೀಸ್ ಠಾಣೆ (ಗೈರು ಹಾಜರಿ) |
| 22 | ಶ್ರೀ.ಕೃಷ್ಣಪ್ಪ | ಟ್ರಾಫಿಕ್ ಪೋಲೀಸ್ ಠಾಣೆ, ಯಲಹಂಕ |
| 23 | ಡಾ॥ಎ.ಪದ್ಮಪ್ರಕಾಶ್ | RWA, B sector, (ಗೈರು ಹಾಜರಿ) |
| 24 | ಶ್ರೀ.ಪದ್ಮಪಾಟೀಲ್ | ಪೂರ್ವಾಂಕರ ಅಪಾರ್ಟ್‌ಮೆಂಟ್, RWA |
| 25 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | RWA, B sector |
| 26 | ಶ್ರೀ.ಆರ್.ಪುಟ್ಟಸ್ವಾಮಿ | RWA, B sector (ಗೈರು ಹಾಜರಿ) |
| 27 | ಶ್ರೀ.ಗಂಗಾಧರನ್.ಕೆ.ಟಿ | RWA, B sector |
| 28 | ಶ್ರೀ.ವಿಜಯ್ ಕುಮಾರ್.ಕೆ. | RWA, B sector |
| 29 | ಶ್ರೀ.ಮಣಿ | LBS Nagara, Pot hole contractor |
| 30 | ಶ್ರೀ.ಬೋರೇಗೌಡ | RWA, Sharada Nagara |
| 31 | ಶ್ರೀ.ಬಿ.ಸಿ.ಶಂಕರ್‌ರೆಡ್ಡಿ, | RWA, Mathrulayout (ಗೈರು ಹಾಜರಿ) |
| 32 | ಡಾ॥ಎಸ್.ಎಂ.ಪ್ರಸಾದ್ | Sector Officer, COVID-19 |
| 33 | ಆರ್.ಸತೀಶ್ | SWM Contractor |
| 34 | ಡಾ॥ಸಂಗೊಣ್ಣೆ | RWA, 10th A cross, A sector (ಗೈರು ಹಾಜರಿ) |
| 35 | ಶ್ರೀ.ನರಸಿಂಹರೆಡ್ಡಿ | Electrical Contractor |
| 37 | ಶ್ರೀ.ಓಬ್‌ಲೇಶ್ | Contractor |
| 38 | ಡಾ.ಎಸ್.ಎಂ.ಪ್ರಸಾದ್ | Sector Officer Covid-19 |
| 39 | ಶ್ರೀ.ರವಿ.ಜಿ | RWA, A Sector |

| | | |
|---|---|---|
| 40 | ಶ್ರೀ.ಸೂರ್ಯನಾರಾಯಣ್ ಕುಮಾರ್ | RWA, Ward No:04 |
| 41 | ಶ್ರೀ.ಲೋಕೇಶ್ | Ward No:03, Garbage Contractor |
| 42 | ಶ್ರೀ.ಲಕ್ಷ್ಮಿನಾರಾಯಣಪ್ಪ | BBMP, ಜಾನುವಾರು ಅಧಿಕಾರಿ<br>(Animal Husbandry) |
| 43 | ಶ್ರೀ.ಸಂಗಪ್ಪ | RWA, B sector |

ದಿನಾಂಕ:07.11.2020 ರಂದು ಬೆಳಿಗ್ಗೆ 11.00 ಗಂಟೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ಕಛೇರಿಯಲ್ಲಿ ಶ್ರೀ.ಮನೋಜ್ ಜೈನ್, ನೋಡಲ್ ಆಫೀಸರ್, ವಾರ್ಡ್ ನಂ:04 ಇವರು ಬಿ.ಬಿ.ಎಂ.ಪಿ ಅಧಿಕಾರಿಗಳು ಹಾಗೂ ಇತರ ಇಲಾಖಾ ಅಧಿಕಾರಿಗಳೊಂದಿಗೆ ನಡೆಸಿದ ವಾರ್ಡ್ ಕಮಿಟಿ ಸಮಿತಿ ಸಭೆಯ ನಡುವಳಿಗಳು.

ಶ್ರೀ.ಸಚಿನ್, ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಶ್ರೀ.ಮನೋಜ್ ಜೈನ್, ವಿಶೇಷ ಆಯುಕ್ತರು, ಬಿ.ಬಿ.ಎಂ.ಪಿ (ಯೋಜನೆ), ವಾರ್ಡ್ ನಂ:04 ರ ನೋಡಲ್ ಆಫೀಸರ್ ರವರನ್ನು ಸಭೆಗೆ ಸ್ವಾಗತ ಕೋರುತ್ತಾ ನಂತರ ಸಭೆಯನ್ನು ಪ್ರಾರಂಭ ಮಾಡಲಾಯಿತು.

ಶ್ರೀ.ಮನೋಜ್‌ಜೈನ್, ವಿಶೇಷ ಆಯುಕ್ತರು, ಬಿ.ಬಿ.ಎಂ.ಪಿ (ಯೋಜನೆ) ನೋಡಲ್ ಆಫೀಸರ್ ರವರು ವಾರ್ಡ್ ಕಮಿಟಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ರವರನ್ನು ವಾರ್ಡ್ ಸಮಸ್ಯೆ ಬಗ್ಗೆ ವಿವರಣೆ ಕೇಳಿದರು.

1. ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್‌ನ ಸದಸ್ಯರು ಸಭೆಯಲ್ಲಿ ಮಾತನಾಡುತ್ತಾ ಬೆಸ್ಕಾಂ ವತಿಯಿಂದ ಮರದ ಕೊಂಬೆಗಳನ್ನು ಕಡಿದು ಹಾಗೇಯೇ ರಸ್ತೆಬದಿಯಲ್ಲಿ ಬಿಟ್ಟು ಹೋಗುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುತ್ತದೆ ಎಂದು ಆಕ್ಷೇಪಣೆ ವ್ಯಕ್ತಪಡಿಸಿದರು.

ಕ್ರಮ: ಸಹಾಯಕ ಅಭಿಯಂತರರು, ಬೆಸ್ಕಾಂ ರವರಿಗೆ ತಮ್ಮ ಇಲಾಖಾ ವತಿಯಿಂದ ವಿದ್ಯುತ್ ಕಂಬಗಳ ಮಾರ್ಗಗಳಲ್ಲಿ ಕಡಿದು ಹಾಕಿರುವ ಮರದ ಕೊಂಬೆಗಳನ್ನು ಕೂಡಲೇ ತೆರವುಗೊಳಿಸಬೇಕೆಂದು ನೋಡಲ್ ಅಧಿಕಾರಿಯವರು ಸೂಚಿಸಿದರು.

2. ಮೂರನೇ ಎ ಅಡ್ಡರಸ್ತೆ, 1ನೇ ಎ ಮುಖ್ಯರಸ್ತೆ ಹಾಗೂ 9ನೇ ಬಿ ಅಡ್ಡರಸ್ತೆ, ಮಾರ್ಗಗಳಲ್ಲಿ ಘನತ್ಯಾಜ್ಯ ಬ್ಲಾಕ್ ಸ್ಪಾಟ್ ಇರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಹಾಗೂ ರಸ್ತೆಗಳ ಸ್ವಚ್ಛತೆಯನ್ನು ಮಾಡದೇ ಇರುವ ಬಗ್ಗೆ ಸಂಬಂಧಿಸಿದ ಘನತ್ಯಾಜ್ಯ ನಿರ್ವಹಣೆ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಿರಿಯ ಆರೋಗ್ಯ ನಿರೀಕ್ಷರವರಿಗೆ ಕೂಡಲೇ ಕ್ರಮಕ್ಕೈಗೊಳ್ಳುವಂತೆ ನೋಡಲ್ ಅಧಿಕಾರಿಯವರು ಸೂಚಿಸಿದರು

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಹಾಗೂ ಕಿರಿಯ ಆರೋಗ್ಯ ನಿರೀಕ್ಷಕರವರು ಬ್ಲಾಕ್ ಸ್ಪಾಟ್ಸ್‌ಗಳನ್ನು ತೆರವುಗೊಳಿಸಲಾಗುವುದು ಹಾಗೂ ದಿನನಿತ್ಯ ರಸ್ತೆಗಳನ್ನು ಸ್ವಚ್ಛತೆ ಮಾಡಲಾಗುವುದೆಂದು ಒಪ್ಪಿದರು.

3. ಘನತ್ಯಾಜ್ಯ ನಿರ್ವಹಣೆಯ ಗುತ್ತಿಗೆದಾರರಾದ ಶ್ರೀ.ಓಬಳೇಶ್ ರವರು ವಾರ್ಡ್ ನಂ:04 ಕ್ಕೆ 21 ಸಂಖ್ಯೆ ಆಟೋ ವಾಹನಗಳು ಹಾಗೂ 03 ಸಂಖ್ಯೆ ಕಾಂಪ್ಯಾಕ್ಟರ್ ಟೆಂಡರ್‌ನಲ್ಲಿ ನಮೂದಿಸಿರುತ್ತಾರೆಂದು ವಿವರಿಸಿದರು.

4. ಶ್ರೀ.ಪ್ರಭುದ್ಧಕಾಂಬ್ಲೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರಿಗೆ ಹೆಚ್ಚುವರಿ ವಾಹನಗಳನ್ನು ಉಪಯೋಗಿಸಲು ರೆಸೋಲ್ಯೂಷನ್ ಮಾಡಿ ವಾಹನಗಳನ್ನು ಪಡೆದುಕೊಳ್ಳಲು ನೋಡಲ್ ಅಧಿಕಾರಿಯವರು ಸೂಚಿಸಿದರು.

5. 3ನೇ ಎ ಅಡ್ಡರಸ್ತೆ, ಎ ಸೆಕ್ಟರ್, (ಶೇಷಾದ್ರಿಪುರಂ ಕಾಲೇಜ್ ಹತ್ತಿರ), ಚಿಕ್ಕಬೊಮ್ಮಸಂದ್ರ ವೃತ್ತ ಹತ್ತಿರ ಪಾರ್ಕಿಂಗ್ ವ್ಯವಸ್ಥೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಲು ನೋಡಲ್ ಅಧಿಕಾರಿಯವರು ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ ರವರಿಗೆ ಸೂಚಿಸಿದರು.

6. ವಾರ್ಡ್ ನಂ:04 ರ ವ್ಯಾಪ್ತಿಯಲ್ಲಿ ರಸ್ತೆ ಬದಿಯ ಪಾದಚಾರಿ ಮಾರ್ಗಗಳಲ್ಲಿ ಅಲ್ಲಲ್ಲಿ ಡೆಬ್ರೀಸ್ ಹಾಕಿರುವುದನ್ನು ದಿನನಿತ್ಯ ತೆರವುಗೊಳಿಸಲು ಹಾಗೂ ಸಿಲ್ಟ್ ಅಂಡ್ ಟ್ರಾಕ್ಟರ್ ಫೋಟೋಗಳನ್ನು ದಿನನಿತ್ಯ ಬಿ.ಬಿ.ಎಂ.ಪಿ ಗ್ರೂಪ್‌ನಲ್ಲಿ ಅಪ್‌ಲೋಡ್ ಮಾಡಲು ಸಹಾಯಕ ಅಭಿಯಂತರರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

ಕ್ರಮ. ಸಹಾಯಕ ಅಭಿಯಂತರರು, ವಾರ್ಡ್ ನಂ;04, ಬಿ.ಬಿ.ಎಂ.ಪಿ ರವರು ಟ್ರಾಕ್ಟರ್ ಮತ್ತು ಶ್ರಮಿಕ ಆಳುಗಳನ್ನು ಉಪಯೋಗಿಸಿಕೊಂಡು ದಿನನಿತ್ಯ ರಸ್ತೆ ಬದಿಯಲ್ಲಿ ಹಾಕಿರುವ ಡೆಬ್ರೀಸ್ ತೆರವುಗೊಳಿಸುವುದಕ್ಕೆ ಕ್ರಮಕೈಗೊಳ್ಳಲಾಗುವುದೆಂದು ಒಪ್ಪಿದರು.

7. 6ನೇ ಬಿ ಮುಖ್ಯರಸ್ತೆ ಮೋರ್ ಪಕ್ಕದಲ್ಲಿರುವ ರಸ್ತೆಯ ಬದಿಯಲ್ಲಿ ಬೆಸ್ಕಾಂ ವತಿಯಿಂದ ಸ್ಪನ್‌ಪೋಲ್ ವಿದ್ಯುತ್ ಕಂಬಗಳನ್ನು ಒಂದರ ಪಕ್ಕದಲ್ಲಿ ಇನ್ನೊಂದಂತೆ ಒಟ್ಟು 03 ಸಂಖ್ಯೆ ಸ್ಪನ್‌ಪೋಲ್‌ಗಳನ್ನು ಅಳವಡಿಸಿರುವುದಕ್ಕೆ ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್ ಶ್ರೀ.ವಿಜಯ್ ಕುಮಾರ್ ರವರು ಆಕ್ಷೇಪಣೆ ವ್ಯಕ್ತಪಡಿಸಿದರು.

ಕ್ರಮ: ಸಹಾಯಕ ಅಭಿಯಂತರರು, ಬೆಸ್ಕಾಂ ರವರಿಗೆ ಸ್ಪನ್‌ಪೋಲ್‌ಗಳನ್ನು ತೆರವುಗೊಳಿಸುವಂತೆ ತಿಳಿಸಿದರು ಹಾಗೂ ಸದರಿ ವಿಷಯದ ಬಗ್ಗೆ ನೋಟೀಸ್ ಜಾರಿ ಮಾಡಲು ಸಂಬಂಧಿಸಿದ ವಾರ್ಡ್ ಕಮಿಟಿ ಕಾರ್ಯದರ್ಶಿಯವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

8. 15ನೇ ಬಿ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ ವತಿಯಿಂದ ಒಳಚರಂಡಿ ಕಾಮಗಾರಿ ಪ್ರಗತಿಯಲ್ಲಿದ್ದು, ಕೊಳವೆ ಸಾಲುಗಳನ್ನು ಅಳವಡಿಸಲಾಗಿರುತ್ತದೆ. ಮುಂದುವರೆದು, ಸದರಿ ಮಾರ್ಗದಲ್ಲಿ ರೆಸ್ಟೋರೇಷನ್‌ನ್ನು ವ್ಯವಸ್ಥಿತವಾಗಿ ಮಾಡದೇ ಇರುವ ಬಗ್ಗೆ ಇದರಿಂದ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ಅಡಚಣೆಯುಂಟಾಗಿರುತ್ತದೆ ಎಂದು ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್ ರವರು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಕ್ರಮ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ (ಒಳಚರಂಡಿ ವಿಭಾಗ) ರವರಿಗೆ 16ನೇ ಬಿ ಅಡ್ಡರಸ್ತೆಯನ್ನು ವ್ಯವಸ್ಥಿತವಾಗಿ ರೆಸ್ಟೋರೇಷನ್ ಮಾಡಲು ಹಾಗೂ ಡಾಂಬರ್ ಹಾಕುವಂತೆ ನೋಟೀಸ್ ಜಾರಿ ಮಾಡಲು ನೋಡಲ್ ಅಧಿಕಾರಿಗಳು ಸೂಚಿಸಿದರು.

9. ವಾರ್ಡ್ ನಂ:04 ರ ಕನಕನಗರದಲ್ಲಿ ವಾಸಮಾಡಿರುವ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್ ರವರ ಬೈಲಪ್ಪ ರವರು ಆಕ್ಷೇಪಣೆ ವ್ಯಕ್ತಪಡಿಸಿದರು.

ಕ್ರಮ:-ಕನಕನಗರದ ಪ್ರದೇಶದಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ ಅಧಿಕಾರಿಗಳ ಜೊತೆ ಸಭೆ ನಡೆಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡುವಂತೆ ಬಿ.ಬಿ.ಎಂ.ಪಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರವರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

10. 10ನೇ ಎ ಅಡ್ಡರಸ್ತೆ, ಎ ಸೆಕ್ಟರ್‌ನಲ್ಲಿ ಬೃಹತ್ತಾಗಿ ಬೆಳೆದಿರುವ ಮರದ ಕೊಂಬೆಗಳನ್ನು ಕತ್ತರಿಸುವಂತೆ ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್ ರವರ ಶ್ರೀ.ಗಂಗಾಧರ್ ರವರು ಕೋರಿದರು.

ಕ್ರಮ:-ವಲಯ ಅರಣ್ಯಾಧಿಕಾರಿಯವರು ಬಿ.ಬಿ.ಎಂ.ಪಿ, ಯಲಹಂಕ ರವರಿಗೆ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳುವಂತೆ ನೋಡಲ್ ಅಧಿಕಾರಿಯವರು ಸೂಚಿಸಿದರು.

11. ಬಿ.ಬಿ.ಎಂ.ಪಿ ಕಛೇರಿಯ ಹಿಂಭಾಗದಲ್ಲಿರುವ ಕೆಂಪೇಗೌಡ ಪಾರ್ಕ್ ಮತ್ತು ಬಸವಲಿಂಗಪ್ಪ ಪಾರ್ಕ್‌ನ ಸುತ್ತಾ ಗ್ರಿಲ್ ಫೆನ್ಸಿಂಗ್ ಕಾಮಗಾರಿಯು ಮಂದಗತಿಯಲ್ಲಿ ನಡೆಯುತ್ತಿರುವ ಬಗ್ಗೆ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್, ಸಂಗಪ್ಪ ರವರು ಆಕ್ಷೇಪಣೆ ವ್ಯಕ್ತಪಡಿಸಿದರು.

ಕ್ರಮ: ವಾರ್ಡ್ ನಂ:04, ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ ರವರಿಗೆ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ನೋಡಲ್ ಅಧಿಕಾರಿಯವರು ಸೂಚಿಸಿದರು.

12. ವಾರ್ಡ್ ನಂ:04, ಸೋಮೇಶ್ವರನಗರ ಮುಖ್ಯರಸ್ತೆ, ಖುಷಿ ಆಸ್ಪತ್ರೆ ಹತ್ತಿರ ಇರುವ ರಾಜಕಾಲುವೆ ಮೇಲೆ ಅಳವಡಿಸಿರುವ ಶೆಡ್‌ನ್ನು ತೆರವುಗೊಳಿಸದೇ ಇರುವ ಬಗ್ಗೆ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ರವರು ಆಕ್ಷೇಪಣೆ ವ್ಯಕ್ತಪಡಿಸಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜಕಾಲುವೆ, ಬಿ.ಬಿ.ಎಂ.ಪಿ ರವರಿಗೆ ರಾಜಕಾಲುವೆ ಮೇಲೆ ಅಳವಡಿಸಿರುವ ಶೆಡ್‌ನ್ನು ಕೂಡಲೇ ತೆರವುಗೊಳಿಸುವುದಕ್ಕೆ ಕ್ರಮಕೈಗೊಳ್ಳಲು ನೋಡಲ್ ಅಧಿಕಾರಿಯವರು ಸೂಚಿಸಿದರು.

13. 16ನೇ ಬಿ ಮುಖ್ಯರಸ್ತೆ ಮತ್ತು ಶಾರದಾನಗರದಲ್ಲಿ ಇತ್ತೀಚೆಗೆ ಕಳ್ಳತನ (ಚೈನ್ಸ್ ಸ್ನಾಕರ್) ಆಗುತ್ತಿರುವ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ರವರು ಆಕ್ಷೇಪಣೆ ವ್ಯಕ್ತಪಡಿಸಿದರು.

ಕ್ರಮ: ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪೋಲೀಸ್ ಕಾನ್ಸ್‌ಟೇಬಲ್, ಯಲಹಂಕ ಉಪನಗರ, ಪೋಲೀಸ್ ಠಾಣೆ ರವರಿಗೆ ಅಗತ್ಯ ಕ್ರಮಕೈಗೊಳ್ಳಲು ನೋಡಲ್ ಅಧಿಕಾರಿಯವರು ಸೂಚಿಸಿದರು.

ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಚರ್ಚಿಸಲಾಗುವುದೆಂದು ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Ramasanjeevaiah

ಶ್ರೀ.ರಾಮಸಂಜೀವಯ್ಯ,
ಸಹಾಯಕ ಅಭಿಯಂತರರು
ವಾರ್ಡ್ ನಂ:04, ವಾರ್ಡ್ ಕಾರ್ಯದರ್ಶಿ

ಶ್ರೀ.ಮನೋಜ್‌ಜೈನ್
ವಿಶೇಷ ಆಯುಕ್ತರು (ಯೋಜನೆ)
ಬಿ.ಬಿ.ಎಂ.ಪಿ, ನೋಡಲ್ ಅಧಿಕಾರಿ (ವಾರ್ಡ್ ನಂ:04)